ದಿನಾಂಕ 1-7-1994ರ ಕೆಳಗೆ ನೆರೆ ಹಾವಳಿ ಸಂತ್ರಸ್ತರಿಗೆ ಪರಿಹಾರ ಒದಗಿಸಲು ವಿನಂತಿಸಿ ಕೊಂಡಿದ್ದು, ಕಾರ್ಖಾನೆಯ ವತಿಯಿಂದ ಮೇಲ್ಕಂಡ ಬಾಬ್ತುಗಳಿಗೆ ಖರ್ಚು ಮಾಡಲಾಗಿದೆ.

ವಿಷಯ : ಘಟಪ್ರಭಾ ಸಹಕಾರ ಸಕ್ಕರೆ ಕಾರ್ಖಾನೆಯ 'ಆ' ವರ್ಗದ ಸದಸ್ಯರು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 764 (844)

ಶ್ರೀ. ವಿ. ಎಸ್. ಕೌಜಲಗಿ (ಅರಭಾವಿ) : ಮಾನ್ಯ ಸಕ್ಕರೆ, ಜವಳಿ, ಪರಿಸರ ಮಾಲಿನ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ. ಘಟಪ್ರಭಾ ಸಹಕಾರ ಸಕ್ಕರೆ ಕಾರ್ಖಾನೆಯಲ್ಲಿರುವ 'ಆ' ವರ್ಗದ ಸದಸ್ಯರ ಸಂಖ್ಯೆ ಎಷ್ಟು ? 'ಆ' ವರ್ಗದ ಪ್ರತಿಯೊಬ್ಬ ಸದಸ್ಯರು ತುಂಬಬೇಕಾದ ಷೇರು ಹಣದ ಮೊತ್ತವೆಷ್ಟು ?

ಆ. ಸದರಿ ಸಕ್ಕರೆ ಕಾರ್ಖಾನೆ ಕಬ್ಬು ಅರೆಯುವ ಈಗಿರುವ ಸಾಮರ್ಥ್ಯವನ್ನು ಹೆಚ್ಚಿಸಲು ಸರ್ಕಾರವು ಅನುಮತಿ ನೀಡಲಾಗಿದೆಯೇ

ಇ. ಅನುಮತಿ ಕೊಟ್ಟಿದಲ್ಲಿ 'ಆ' ವರ್ಗದ ಸದಸ್ಯರು ತುಂಬಬೇಕಾದ ಹೆಚ್ಚುವರಿ ಷೇರು ಹಣದ ಮೊತ್ತವೆಷ್ಟು ಈಗಾಗಲೇ ಹೆಚ್ಚುವರಿ ಷೇರು ಹಣವನ್ನು ತುಂಬಿರುವವರ ಸಂಖ್ಯೆ ಎಷ್ಟು

ಈ. ಹೆಚ್ಚಿನ ಷೇರು ಹಣವನ್ನು ತುಂಬದೇ ಆರ್ಥಿಕ ತೊಂದರೆಯನ್ನು ಅನುಭವಿಸುತ್ತಿರುವ 'ಆ' ವರ್ಗದ ಸದಸ್ಯರಿಗೆ ಸಂಬಂಧಿಸಿದಂತೆ ಸರ್ಕಾರವು ಹೆಚ್ಚುವರಿ ಷೇರು ಹಣ ತುಂಬುವ ಕುರಿತು ಯಾವ ಕ್ರಮ ಕೈಗೊಳ್ಳಲಾಗಿದೆ.

ಉ. ಹೆಚ್ಚುವರಿ ಷೇರು ಹಣವನ್ನು ತುಂಬದೇ ಇರುವ ಸದಸ್ಯರಿಗೆ ಚುನಾವಣೆಯಲ್ಲಿ ಮತ ಚಲಾಯಿಸಲು ಅವಕಾಶವಿದೆಯೇ ?

ಶ್ರೀ ಪಿ. ಸಿ. ಸಿದ್ದನಗೌಡರ್ (ಸಕ್ಕರೆ, ಜವಳಿ ವಿಜ್ಞಾನ, ಯಂತ್ರಕಲೆ ಪರಿಸರ ಮತ್ತು ಜೀವ ಪರಿಸ್ಥಿತಿ ರಾಜ್ಯ ಸಚಿವರು):

ಅ. 'ಅ' ವರ್ಗದ ಸದಸ್ಯರ ಸಂಖ್ಯೆ. 11841 'ಆ' ವರ್ಗದ ಪ್ರತಿಯೊಬ್ಬ ಸದಸ್ಯರು ತುಂಬಬೇಕಾದ ಷೇರು ಹಣದ ಮೊತ್ತ ಪ್ರತಿ ಶೇರಿಗೆ ರೂ 2000.00

ಆ. ಸದರಿ ಸಕ್ಕರೆ ಕಾರ್ಖಾನೆಯ ಕಬ್ಬು ಅರೆಯುವ ಸಾಮರ್ಥ್ಯವನ್ನು 1250 ಟನ್‌ಗಳಿಂದ 2500 ಟನ್‌ಗಳಿಗೆ ಹೆಚ್ಚಿಸಲು ಭಾರತ ಸರ್ಕಾರ ಅನುಮತಿ ನೀಡಿರುತ್ತದೆ. ಆದರೆ ಕಾರ್ಖಾನೆಯು 2500 ಟನ್‌ಗಳಿಗೆ ಬದಲು 3500ಟನ್‌ಗಳಿಗೆ ಸಾಮರ್ಥ್ಯವನ್ನು ವಿಸ್ತರಿಸಲು ಕೋರಿದ್ದು ರಾಜ್ಯ ಸರ್ಕಾರವು ಕಾರ್ಖಾನೆಯ ಕೋರಿಕೆಯನ್ನು ಭಾರತ ಸರ್ಕಾರಕ್ಕೆ ಶಿಫಾರ್ಸು ಮಾಡಿದೆ. ಈ ವಿಷಯ ಭಾರತ ಸರ್ಕಾರದ ಪರಿಶೀಲನೆಯಲ್ಲಿದ್ದು 3500 ಟನ್‌ಗಳಿಗೆ ಹೆಚ್ಚಿಸಲು ಅನುಮತಿ ಪತ್ರವನ್ನು ನಿರೀಕ್ಷಿಸಲಾಗಿದೆ.

ಇ. ಕಾರ್ಖಾನೆಯ ಬೈಲಾ ತಿದ್ದುಪಡಿಯ ಪ್ರಕಾರ ಪ್ರತಿ ಷೇರಿನ ಬೆಲೆ

ರೂ. 1000 ರಿಂದ ರೂ. 2000ಕ್ಕೆ ಹೆಚ್ಚಿಸಲಾಗಿರುವುದರಿಂದ ರೂ. 1000 ಷೇರು ಹೊಂದಿದ್ದ ಪ್ರತಿ ಒಬ್ಬ 'ಅ' ವರ್ಗದ ಸದಸ್ಯರು ಹೆಚ್ಚುವರಿ ರೂ. 1000 ತುಂಬಬೇಕಾಗುತ್ತದೆ. ಆ ಪ್ರಕಾರ 'ಅ' ವರ್ಗದ 11841 ಸದಸ್ಯರು ಈ ಹೆಚ್ಚುವರಿ ಹಣವನ್ನು ತುಂಬಿರುತ್ತಾರೆ.

ಈ. ಕಾರ್ಖಾನೆಯ ಬೈಲಾ ನಿಯಮಕ್ಕೆ ತಿದ್ದುಪಡಿಯಾದ ಮೇಲೆ 'ಅ' ವರ್ಗದ 11841 ಸದಸ್ಯರು ಹೆಚ್ಚುವರಿ ಷೇರು ಹಣವನ್ನು ತುಂಬಿದೆ ಇದ್ದ ಸದಸ್ಯರ ಸಂಖ್ಯೆ. 1924. ಹೆಚ್ಚುವರಿ ಷೇರು ಹಣವನ್ನು ತುಂಬಬೇಕಾದ್ದರ ವಿರುದ್ಧ 5 ಜನ ಸದಸ್ಯರು ಕರ್ನಾಟಕ ಶ್ರೇಷ್ಠ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂ. 18112:94 ಸಲ್ಲಿಸಿದ್ದು ವಾದಿಗಳು ಒಪ್ಪಂದದ ಮೇಲೆ ಅಂತರದ ಷೇರು ಹಣವನ್ನು ತುಂಬಿಸಿಕೊಂಡು ಅವರ ಸದಸ್ಯತ್ವವನ್ನು ಮುಂದುವರೆಸಬೇಕೆಂದು ದಿನಾಂಕ 9-1-95ರಲ್ಲಿ ನ್ಯಾಯಾಲಯದ ಆದೇಶವಾಗಿದೆ. ಸಂಬಂಧಪಟ್ಟ ಬೈಲಾ ನಿಯಮಕ್ಕೆ ತಿದ್ದುಪಡಿಯಾಗಿ ಪ್ರತಿ ಷೇರಿನ ಬೆಲೆಯನ್ನು ಹೆಚ್ಚಿಸಿಕೊಂಡಿರುವುದರಿಂದ ಸರ್ಕಾರವು ಕೈಗೊಳ್ಳಬೇಕಾದ ಕ್ರಮ ಇರುವುದಿಲ್ಲ. ಷೇರಿನ ಬೆಲೆಯನ್ನು ಕಾನೂನಿನ ಚೌಕಟ್ಟಿನಲ್ಲಿ ಹೆಚ್ಚಿಸುವ ಕ್ರಮ ಏರ್ಪಟ್ಟಿರುವುದರಿಂದ ಅದಕ್ಕೆ ಸಮ್ಮತಿ ಇಲ್ಲದವರು ಕಾನೂನು ಚೌಕಟ್ಟಿನಲ್ಲಿ ಪರಿಹಾರ ಪಡೆಯಬೇಕಾಗಿರುತ್ತದೆ.

ಉ. ಕಾರ್ಖಾನೆಯ ತಿದ್ದುಪಡಿಯಾಗಿರುವ ಬೈಲಾ ನಿಯಮದ ಪ್ರಕಾರ 'ಅ' ವರ್ಗದ ಷೇರಿನ ಬೆಲೆ ರೂ 2000 ಆಗಿರುತ್ತದೆ. ಆದುದರಿಂದ ರೂ. 2000 ಷೇರು ಹಣವನ್ನು ಹೊಂದಿರುವ 'ಅ' ವರ್ಗದ ಸದಸ್ಯರು ಚುನಾವಣೆಯಲ್ಲಿ ಭಾಗವಹಿಸಲು ಅವಕಾಶವುಳ್ಳವರಾಗಿರುತ್ತಾರೆ.

ವಿಷಯ : ಘಟಪ್ರಭಾ ಸಹಕಾರ ಸಕ್ಕರೆ ಕಾರ್ಖಾನೆ ಕುರಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 765 (842)

ಶ್ರೀ ವಿ. ಎಸ್. ಕೌಜಲಗಿ (ಅರಭಾವಿ) : ಮಾನ್ಯ ಸಕ್ಕರೆ, ಜವಳಿ, ಪರಿಸರ ಮಾಲಿನ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ. ಘಟಪ್ರಭಾ ಸಹಕಾರ ಸಕ್ಕರೆ ಕಾರ್ಖಾನೆಯು 'ಅ' ವರ್ಗದ ಸದಸ್ಯರ ಕಬ್ಬನ್ನು ನುರಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ. ಹಾಗಿದ್ದಲ್ಲಿ ಈ ಕುರಿತು ಸರಕಾರ ಯಾವ ಕ್ರಮ ಕೈಗೊಂಡಿರುವುದು.

ಇ. ಇದುವರೆಗೆ ಕಾರ್ಖಾನೆಯು ನುರಿಸಿದ 'ಅ' ವರ್ಗದ ಸದಸ್ಯರ ಕಬ್ಬಿನ ಪ್ರಮಾಣವೆಷ್ಟು ?

ಶ್ರೀ ಪಿ. ಸಿ. ಸಿದ್ದನಗೌಡರ್ (ಸಕ್ಕರೆ, ಜವಳಿ, ವಿಜ್ಞಾನ, ಯಂತ್ರ ಕಲೆ ಪರಿಸರ ಮತ್ತು ಜೀವಪರಿಸ್ಥಿತಿ ರಾಜ್ಯ ಸಚಿವರು):

ಅ. ಇಲ್ಲ.

ಆ. ಉದ್ಭವಿಸುವುದಿಲ್ಲ.

ಇ. 2,37,096 ಟನ್‌ಗಳು.